ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 04.10.2023.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:**

ದಾವಾ ಸ್ವತ್ತಿನ ಪೂರ್ವಕ್ಕೆ ಶಿವಬಸಯ್ಯ ಗುತ್ತಿದಾರ ರವರ ಜಮೀನು ಇರುತ್ತದೆ. ಅವರ ಸರ್ವೆ ನಂಬರ 218 ಇರುತ್ತದೆ. ಸದರಿ ಜಮೀನಿನ ಹಿಸ್ಸಾ ನನಗೆ ಹೇಳಲು ಬರುವುದಿಲ್ಲ. ನನ್ನ ಜಮೀನಿನ ಪಶ್ಚಿಮಕ್ಕೆ ಶಫಿ ಸಗರಿ ರವರ ಸರ್ವೆ ನಂ.223 ಜಮೀನು ಇರುತ್ತದೆ. ಸದರಿ ಜಮೀನಿನ ಹಿಸ್ಸಾ ನನಗೆ ಹೇಳಲು ಬರುವುದಿಲ್ಲ. ನನ್ನ ಜಮೀನಿನ ಉತ್ತರಕ್ಕೆ ರಾಮಚಂದ್ರಪ್ಪ ಪೂಜಾರಿ ರವರ ಸರ್ವೆ ನಂ.224 ಜಮೀನು ಇರುತ್ತದೆ. ಸದರಿ ಜಮೀನಿನ ಹಿಸ್ಸಾ ನನಗೆ ಹೇಳಲು ಬರುವುದಿಲ್ಲ. ನನ್ನ ಜಮೀನಿನ ದಕ್ಷಿಣಕ್ಕೆ ಯಶ್ವಂತ ದೂಳಪ್ಪ ರವರ ಜಮೀನು ಇರುತ್ತದೆ. ಅವರ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲಾ.

ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಿಪಿ-5 ನ್ನು ಹೊರತುಪಡಿಸಿ ಚೆಕ್‌ಬಂದಿ ತೋರಿಸಲು ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ಸರ್ವೆ ನಂ.220 ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.220 ರಲ್ಲಿ 3 ನೇ ಪ್ರತಿವಾದಿಯರು ಆಶ್ರಯ ಯೋಜನೆ ಪ್ಲಾಟ್‌ಗಳ ನಿರ್ಮಾಣ ಮಾಡುವ ಸಲುವಾಟಗಿ 2 ಎಕರೆ 30 ಗುಂಟೆ ಹಾಗೂ 2 ಎಕರೆ 10 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.220 ರಲ್ಲಿ 3 ನೇ ಪ್ರತಿವಾದಿ ರವರ ಆಶ್ರಯ ಕಾಲೋನಿ ಇದೆ ಎಂದರೆ ನನಗೆ ಗೊತ್ತಿಲ್ಲಾ. 3 ನೇ ಪ್ರತಿವಾದಿ ರವರ ಮೇಲೆ ಹೇಳಿದ 2 ಎಕರೆ 30 ಗುಂಟೆ ಹಾಗೂ 2 ಎಕರೆ 10 ಗುಂಟೆ ಜಮೀನನ್ನು ನಿರ್ಗಗತಿಕರಿಗೆ ಕೊಡುವ ಸಲುವಾಗಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ.

ಮೇಲೆ ಹೇಳಿದ ಜಮೀನುಗಳ ಪೈಕಿ ಬಿಇಒ ಆಳಂದ ರವರು ಸರ್ಕಾರಿ ಶಾಲೆ

ತೆರೆಯುವ ಸಲುವಾಗಿ 100 ಅಡಿ ಉತ್ತದ 100 ಅಗಲ ಪ್ಲಾಟ್ ಬೆಕೆಂದು 3 ನೇ ಪ್ರತಿವಾದಿಗೆ ಅರ್ಜಿ ಕೊಟ್ಟಿದ್ದು, ಸದರಿ ಅರ್ಜಿಯ ಅನುಗುಣವಾಗಿ ಜಿಲ್ಲಾಧಿಕಾರಿಗಳ ಪರವಾನಿಗೆ ಪಡೆದು, ಸದರಿ 100 ಅಡಿ ಉದ್ದ 100 ಅಡಿ ಅಗಲ ಜಾಗದಲ್ಲಿ ಸರ್ಕಾರಿ ಶಾಲೆ ಕಟ್ಟಲಾಗಿದೆ ಎಂದರೆ ನನಗೆ ಗೊತ್ತಿಲ್ಲಾ. ಅದೇ ರೀತಿ 2 ನೇ ಪ್ರತಿವಾದಿಯರು ಕೂಡಾ ತಮ್ಮ ಕಛೇರಿ ಹಾಗೂ ವಸತಿ ಗೃಹ ನಿರ್ಮಾಣ ಮಾಡುವ ಸಲುವಾಗಿ ಅರ್ಜಿ ಕೊಟ್ಟಿದ್ದು, ಅದರ ಅನುಗುಣವಾಗಿ ಅಲ್ಲಿ ಕೂಡಾ ಅರಣ್ಯ ಇಲಾಖೆ ಕಛೇರಿ ಮತ್ತು ಗೃಹ ನಿರ್ಮಾಣವಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲಾ. ನಾನು ಮೇಲೆ ಹೇಳಿದ ಸರ್ಕಾರಿ ಶಾಲೆ ಮತ್ತು ಅರಣ್ಯ ಇಲಾಖೆ ಕಛೇರಿ ಮತ್ತು ವಸತಿ ಗೃಹಗಳು ಇದ್ದ ಬಗ್ಗೆ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ಮಾಡಿಲ್ಲಾ. ಸರ್ವೆ ನಂ.220 ರಲ್ಲಿ 1 ಎಕರೆಗೆ ಏನು ಬೆಲೆ ಬಾಳುತ್ತದೆ ಎಂದು ನನಗೆ ಗೊತ್ತಿಲ್ಲಾ.

2003 ಮತ್ತು 2004 ರಲ್ಲಿ ತಯಾರಿಸಿದ ಫಾರಂ ನಂ.10 ರ ಪ್ರಕಾರ ಅಮಲುಬಜಾವಣೆ ಆಗಿಲ್ಲಾ ಎಂದರೆ ನನಗೆ ಗೊತ್ತಿಲ್ಲ. ಸದರಿ 2003 ಮತ್ತು 2004 ನೇ ಸಾಲಿನಲ್ಲಿ ತಯಾರಿಸಿದ ಫಾರಂ ನಂ.10 ನ್ನು ಅಮಲುಬಜಾವಣೆ ತಂದಲ್ಲಿ ನನ್ನ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಫಾರಂ ನಂ.10 ರ ಪ್ರಕಾರ 1 ಎಕರೆ 21 ಗುಂಟೆ ಜಮೀನನ್ನು ಯಶ್ವಂತ ದೌಲಪ್ಪ ರವರ ಹೆಸರಿನಲ್ಲಿ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಿಸ್ಸಾ ನಂ.2 ರಲ್ಲಿ ಪುಲಾಬಾಯಿ ಕಾಶಿನಾಥ ಪವಾರ ರವರ ಹೆಸರಿನಲ್ಲಿ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಿಸ್ಸಾ ನಂ.3 ರಲ್ಲಿ ಲಕ್ಷ್ಮಣ ವಾಲಚಂದ್ರ ಪವಾರ ರವರ ಹೆಸರಿನಲ್ಲಿ 1 ಎಕರೆ 25 ಗುಂಟೆ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಹಿಸ್ಸಾ ನಂ.4 ರಲ್ಲಿ ಭೋಜು ತಂದೆ ಹೊಬ್ಬು ರವರ ಹೆಸರಿನಲ್ಲಿ 1 ಎಕರೆ 4 ಗುಂಟೆ

ಜಮೀನನ್ನು ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಹಿಸ್ಸಾ ನಂ.5 ರಲ್ಲಿ ರಾಜ್ಯಪಾಲರು ಕರ್ನಾಟಕ ಸರ್ಕಾರ ಪರವಾಗಿ ಟಿಎಂಸಿ ಆಳಂದ ಹಾಗೂ ಇಇ ನೀರು ಸರಬುರಾಜು ಮತ್ತು ಒಳಚಂರಡಿ ಇಲಾಖೆ ಹೆಸರಿನಲ್ಲಿ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2003 ಮತ್ತು 2004 ರಲ್ಲಿ ಆದ ಫಾರಂ ನಂ.10 ನ್ನು ಪ್ರಶ್ನಿಸಿ ನಾನು ಡಿಡಿಎಲ್ಆರ್ ಕಛೇರಿಯಲ್ಲಿ ಅಪೀಲು ಸಲ್ಲಿಸಿದ್ದೆ ಅದು ವಜಾಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ನನ್ನ ವಕೀಲರು ಹಾಜರು ಆಗದೇ ಇರುವ ಕಾರಣ ವಜಾಯಾಗಿದೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ಅಪೀಲು ದಿಃ 17.09.2009 ರಂದು ಸಂಪೂರ್ಣ ವಾದ ವಿವಾದ ನಂತರವೇ ವಜಾಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಜಾಯಾದ ಅಪೀಲಿನ ಬಗ್ಗೆ ದಾವೆಯಲ್ಲಿ ಬರೆದಿಲ್ಲಾ ಎಂದರೆ ಸರಿ. ನಾನು ಹೇಳುವ ಹಾಗೇ ನನ್ನ ಮಾರಾಟಗಾರರೇ ದಾವಾ ಸ್ವತ್ತಿನ ಮಾಲಿಕರು ಇರದೇ ಇರುವ ಕಾರಣ ನನಗೆ ಮಾಲಿಕತ್ವ ಬರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಜಮೀನಿನ 4 ಕಡೆ ಇರುವ ಚೆಕ್‌ಬಂದಿ ಮಾಲಿಕರು ಮಾತ್ರ ನನ್ನ ಜಮೀನನ್ನು ಅತೀಕ್ರಮಿಸಬಹುದು ಹೊರತು, ಹೊರಗಿನಿಂದ ಬೇರೆ ಯಾರು ನನ್ನ ಜಮೀನನ್ನು ಅತೀಕ್ರಮಿಸಲು ಬರುವುದಿಲ್ಲ ಎಂದರೆ ಸರಿ. ಮೇಲೆ 2 ಎಕರೆ 30 ಗುಂಟೆ, 2 ಎಕರೆ 10 ಗುಂಟೆ ಜಮೀನು ಖರೀದಿಸಿದ ಪುರಸಭೆ ರವರ ಜಮೀನಿನಲ್ಲಿ ಸರ್ಕಾರಿ ಶಾಲೆ, ಅರಣ್ಯ ಇಲಾಖೆ ಕಛೇರಿ ಮತ್ತು ವಸಗಿ ಗೃಹಗಳು ಹಾಗೂ ಆಶ್ರಯ ಕಾಲೋನಿ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲಾ. ಈ ದಾವೆಯಲ್ಲಿ ಸತ್ಯ ಸಂಗತಿಯನ್ನು ಮುಚ್ಚಿ ಇಟ್ಟು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯರು ಖರೀದಿಸಿದ 2 ಎಕರೆ 30 ಗುಂಟೆ ಜಮೀನು ಮತ್ತು 2 ಎಕರೆ 10 ಗುಂಟೆ ಜಮೀನನ್ನು ನನ್ನ ಯಾವುದೇ ಹಕ್ಕುಸತಾ ಇರುವುದಿಲ್ಲ ಎಂದರೆ ಸರಿ. ಆದರೆ ನನ್ನ ಜಮೀನಿಗೆ ಮಾತ್ರ ನನ್ನ ಹಕ್ಕಕು ಇರುತ್ತದೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯರು ಖರೀದಿಸಿದ 2 ಎಕರೆ 30 ಗುಂಟೆ ಜಮೀನು ಮತ್ತು 2 ಎಕರೆ 10 ಗುಂಟೆ ಜಮೀನಿನ ಮಾಲಿಕರು ಮತ್ತು ಕಬ್ಜೆದಾರರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ನಾನು ಹೇಳಿದಂತೆ ದಾವಾ ಸ್ವತ್ತಿನ ಮಾಲಿಕನು ಮತ್ತು ಕಬ್ಜೆದಾರನು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**